ಪ್ರಸಕ್ತ ವರ್ಷ ಅಂದರೆ 2006–07ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಆ) ನಗರ ಆಶ್ರಯ ಯೋಜನೆಯಡಿ ಫಲಾನುಭವಿಗಳ ಆಯ್ಕೆಯನ್ನು ಈ ಕೆಳಕಂಡ ನಿಯಮಗಳನ್ನು ಅನುಸರಿಸಿ ಆಯ್ಕೆ ಮಾಡಲಾಗುತ್ತದೆ.

1. ಫಲಾನುಭವಿ ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು ಯಾವುದೇ ನಗರ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಆಯಾ ನಗರ ಸಭೆಯ ನಿವೇಶನ ರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿರಬೇಕು.

2. ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು. (ಪ್ರಸ್ತುತ ಮಿತಿಯು ವಾರ್ಷಿಕ ರೂ.11800/– ಆಗಿರುತ್ತದೆ.)

3. ಮನೆ/ನಿವೇಶನದ ಹಕ್ಕುಪತ್ರ ಹೆಂಡತಿ ಹೆಸರಿನಲ್ಲಿ ಇರಬೇಕು. (ಅಂಗವಿಕಲರು, ವಿಧುರರು, ಮಾಜಿ ಸೈನಿಕರನ್ನು ಹೊರತುಪಡಿಸಿ)

4. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ನಿವೇಶನ/ವಸತಿ ಸೌಲಭ್ಯ ಪಡೆದಿರಬಾರದು.

ಇ) ನಗರ ಆಶ್ರಯ ಯೋಜನೆಯಡಿ ಆಶ್ರಯ ಸಮಿತಿಗಳಿಗೆ ನಿಯಮಾನುಸಾರ ಫಲಾನುಭವಿಗಳ ಆಯ್ಕೆಯನ್ನು ಮಾಡಲು ವಹಿಸಲಾಗಿರುತ್ತದೆ.

806(1179): ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯದಲ್ಲಿ ಬೋಧಕ/ ಬೋಧಕೇತರ ಸಿಬ್ಬಂದಿಯ ನೇಮಕಾತಿ ನಡೆದಿರುವುದು ನಿಜವೇ ;

ಆ) ಈ ನೇಮಕಾತಿಯಲ್ಲಿ ಯಾವ ಮಾನದಂಡಗಳನ್ನು ಅನುಸರಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ ;

ಇ) ಈ ನೇಮಕಾತಿಯಲ್ಲಿ ಭ್ರಷ್ಟಾಚಾರ ಹಾಗೂ ಅಕ್ರಮ ನಡೆದಿದೆ ಎಂದು ಸಾರ್ವಜನಿಕರಿಂದ ಪ್ರತಿಭಟನೆ, ಟೀಕೆ ಮತ್ತು ಆರೋಪಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ;

ಉ) ನೇಮಕಾತಿಯಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮಗಳು ನಡೆಯದಂತೆ ಸರ್ಕಾರವು ಯಾವ ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) –

ಅ) ಬಿಜಾಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ಬೋಧಕ ಸಿಬ್ಬಂದಿ ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ. ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ ನೇಮಕಾತಿ ನಡೆದಿರುವುದಿಲ್ಲ.

ಆ) 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–ದನುಸಾರ ಸರ್ಕಾರವು ನೇಮಕಾತಿ ಮಂಡಳಿಗಳಿಗೆ ನಾಮನಿರ್ದೇಶನ ಮಾಡಿದ್ದು, ಅದರನುಸಾರ ವಿಶ್ವವಿದ್ಯಾಲಯವು ನೇಮಕಾತಿ ಮಂಡಳಿ ರಚಿಸಿ ನಿಯಮಗಳನುಸಾರ ನೇಮಕಾತಿ ಮಾಡಲಾಗಿದೆ.

ಇ) ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿ ಹುದ್ದೆಗೆ ಖಾಯಂ ನೇಮಕಾತಿಯಲ್ಲಿ ಅವ್ಯವಹಾರ ನಡೆದಿರುವುದಾಗಿ ಇತ್ತೀಚೆಗೆ ದೂರು ಮನವಿಯೊಂದು ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ.

ಈ) ದೂರು ಅರ್ಜಿಯ ಪರಿಶೀಲನೆಯ ನಂತರ ತೀರ್ಮಾನಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

807(1180): ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾಲಯದಲ್ಲಿ ಕೊಠಡಿಗಳು, ಕಟ್ಟಡಗಳು, ಅಗತ್ಯ ಪೀಠೋಪಕರಣಗಳು ಮತ್ತು ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;